ಶ್ರೀ ಕಾಗೋಡು ತಿಮ್ಮಪ್ಪ:—ಅಧ್ಯಾಪಕರುಗಳಿಂದ ದೂರುಗಳು ಬಂದಿವೆ ಎಂದು ಹೇಳಿದ್ದೀರಿ. ಅವು ಯಾವಾಗ ಬಂದಿವೆ ? ಅವುಗಳ ಬಗ್ಗೆ ಏನಾದರೂ ತನಿಖೆ ಮಾಡಿದ್ದೀರಾ ?

ಶ್ರೀ ಎ. ಆರ್. ಬದ್ರಿನಾರಾಯಣ :— ಮ್ಯಾನೇಜ್‌ಮೆಂಟಿನವರು ಅವರ ಮೇಲೆ ನಿರ್ಲಕ್ಷ್ಯತೆ ಮತ್ತು ಅವಿಧೇಯತೆ ಆರೋಪಣೆ ಮಾಡಿದ್ದಾರೆ, ಮ್ಯಾನೇಜ್‌ಮೆಂಟಿನವರು ಮಾಡಿರುವ ಆರೋಪಣೆ ಸರಿಯಲ್ಲ ಅಧ್ಯಾಪಕರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕು ಎಂದು ಡೆಪ್ಯೂಟಿ ಡೈರೆಕ್ಟರ್‌ರವರು ಹೇಳಿದರು. ಮ್ಯಾನೇಜ್‌ಮೆಂಟಿನವರು ತಿರುಗಿ ಡೈರೆಕ್ಟರವರಿಗೆ ಅಪೀಲು ಮಾಡಿದ್ದಾರೆ.

The Director has sent it back for a fresh enquiry.

ಶ್ರೀ ಕಾಗೋಡು ತಿಮ್ಮಪ್ಪ :—ಅಧ್ಯಾಪಕ ವರ್ಗದವರು ಕೊಟ್ಟ ದೂರುಗಳನ್ನು ಪರಿಶೀಲನೆ ಮಾಡಿದ್ದೀರಾ?

ಶ್ರೀ ಎ. ಆರ್. ಬದ್ರಿನಾರಾಯಣ :—ಆ ದೂರುಗಳ ಫಲಿತಾಂಶಕ್ಕಾಗಿ ಡಿ. ಪಿ. ಐ.ಗೆ ಅದನ್ನು ರೆಫರ್ ಮಾಡಿದ್ದಾರೆ.

Sri DAMODAR MOOLKY.—In your answer you have said that a fresh enquiry has been ordered. Meanwhile, the Management has dismissed a person. Is the Government aware of it ?

Sri A. R. BADARINARAYANA.—If Government receives information it will take the necessary action.

BRIDGE ACROSS KRISHNA RIVER NEAR THANGADGI VILLAGE

752. Sri M. M. SAJJAN (Muddebihal).—

Will the Minister for Public Works and Electricity be pleased to state :—

(a) whether the plans and estimates were submitted to the Government for the construction of a major bridge over the Krishna River near Thangadgi village during the year 1962 or so ;

(b) whether it is a fact that the revised estimates and plans are prepared now ; if so, whether it will be sanctioned this year ;

(c) whether it has come to the notice of Government that nearly thousands of people cross over the river Krishna near Thangadgi every day ;

(d) whether it has come to the notice of Government that nearly 86 persons lost their lives in the two boats tragedies during 1961 and 1971 for want of a bridge near Thangadgi ?

Sri H. M. CHANNABASAPPA (Minister for Public Works and Electricity).—

(*a*) No.

(*b*) No.

(*c*) Yes.

(*d*) Yes. There were two boats tragedies during 1961 and 1970 (not 1971). Loss of life during the 1961 mishap is not available. During the accident of 1970, 64 persons are reported to have died. 49 bodies were traced and bodies of 15 persons were not traced and presumed dead.

Absence of a bridge may not be he cause for the tragedies.

Sri M. M. SAJJAN.—Sir, is the Government aware that without a bridge between Thangadgi and Bannur over the Krishna river, people cannot pass over there ?

Sri H. M. CHANNABASAPPA.—People can pass over and it is through boats and also through crossing during summer.

Sri M. M. SAJJAN.—Sir, I understand when there was a National Highway No. 13 passing via Thangadgi and Bannur. estimates and plans of this project near Thangadi were ready and even now they are before Government. Is it a fact ?

Sri H. .M. CHANNABASAPPA.—No ; the road in between Hunagund and Mangoli ; there are two ways ; one is the old way via Talikot and Bagevadi and the other is via just below Alamatti dam. This being the shortest one, they have chosen the shortest route via Alamatti rather than the one via Thangadgi.

ಶ್ರೀ ಜಿ. ಎಲ್. ಕಬಾಡಿ :—ಈಗ ತಂಗಡಿಗಿ ಗ್ರಾಮದ ಹತ್ತಿರ ಸೇತುವೆಯನ್ನು ಕಟ್ಟುವುದಕ್ಕೆ ಅಂದಾಜುಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆಯೇ ಎಂದು ಕೇಳಿದ್ದಕ್ಕೆ ನಿಜವಲ್ಲ ಎಂದು ಹೇಳಿದಿರಿ. ಮೊದಲು ಸೊಲ್ಲಾಪುರ, ಚಿತ್ರದುರ್ಗ ನ್ಯಾಷನಲ್‌ಹೈವೇ ನಂಬರ್ 13 ಇಂಡಿ—ಸಿಂದಗಿ ತಾಲ್ಲೂಕ್ ಮುಖೇನ ಹೋಗುತ್ತದೆ ಅದರ ಬಗ್ಗೆ ಪ್ಲಾನ್‌ಎಸ್ಟಿಮೇಟಿಕ ಮೊದಲು ಮಾಡಲಾಗಿತ್ತು. ಈ ಪ್ಲಾನ್ ಎಸ್ಟಿಮೇಟ್ ಇಲ್ಲ ಎಂದು ಹೇಳಿದಿರಿಇಲ್ಲಿಯವರೆಗೆ ಪ್ಲಾನ್ ಎಸ್ಟಿಮೇಟ್ ಆಗಿದ್ದರೆ ಎಷ್ಟು ಆಗಿತ್ತು ಮತ್ತು ಸರ್ಕಾರದವರು ಈಗಲಾದರೂ ಸಹ ಸೌಕರ್ಯಕ್ಕಾಗಿ ಬ್ರಿಜ್ಡ್ ತೆಗೆದುಕೊಳ್ಳುತ್ತಾರೆಯೇ ಹೇಗೆ ?

ಶ್ರೀ ಎಚ್. ಎಂ. ಚನ್ನಬಸಪ್ಪ :—ಈ ಬ್ರಿಡ್ಜ್‌ನ್ನು ನಾನಾ ಕಾರಣಗಳಿಗೋಸ್ಕರವಾಗಿ ಗೌವರ್ನ್‌ಮೆಂಟ್ ಆಫ್ ಇಂಡಿಯಾದವರು ಒಪ್ಪಿಲ್ಲ ಅದನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು

ಹೇಳಿದ್ದಾರೆ. ಕಾರಣಗಳನ್ನು ಬೇಕಾದರೆ ನಾನು ಕೊಡಬಲ್ಲೆ ಒಂದು 13-ನೇ ನ್ಯಾಷನಲ್ ಹೈವೇ ಫೈನಲ್ ಅಲೈನ್‌ಮೆಂಟ್ ಮಾಡಿರುವ ಪ್ರಕಾರ ಇದು ಅದರಲ್ಲಿ ಬರುವುದಿಲ್ಲ. ಅದು ನಾರಾಯಣಪುರ ಡ್ಯಾಮಿಗೆ ಮತ್ತಷ್ಟು ಹತ್ತಿರವಾಗಿರುವುದರಿಂದ ಅದಕ್ಕೆ ಹೆಚ್ಚಿನ ಖರ್ಚು ತಗಲುತ್ತದೆ. 4 ನೆಯದು ಡಿಸ್ಟೆನ್ಸ್ ಹೆಚ್ಚು ಆಗುತ್ತದೆ. ಈ ನಾಲ್ಕು ಕಾರಣಗಳಿಗೋಸ್ಕರವಾಗಿ ಗೌವರ್ನ್‌ಮೆಂಟ್ ಆಫ್ ಇಂಡಿಯಾ ಈ ಅಲೈನ್‌ಮೆಂಟ್ ಟರ್ನ್ ಡೌನ್ ಮಾಡಿ ಬೇರೆ ಅಲೈನ್‌ಮೆಂಟ್ ಮಾಡಿದ್ದಾರೆ. ಮಲಪ್ರಭಾ ಮೇಲೆ ಒಂದು ಸೇತುವೆ ಮತ್ತು ಅಲಮಟ್ಟಿ ಬಳಿ ಕೃಷ್ಣಾ ಮೇಲೆ ಒಂದು ಸೇತುವೆ ಇವುಗಳನ್ನು ಈಗಾಗಲೇ ಕಟ್ಟುತ್ತಾ ಇದ್ದೇವೆ. ಇದು ಬಹುಶಃ ತಮ್ಮ ಗಮನದಲ್ಲಿರಬೇಕು.

ಶ್ರೀ ಜೆ. ಎಲ್. ಕಬಾಡಿ :—ಈಗ ತಂಗಡಿಗೆ ಮತ್ತು ಸುತ್ತಮುತ್ತ ಇರುವ ಜನರು ನದಿಯನ್ನು ದಾಟಿ ಹೋಗುವ ಪರಿಸ್ಥಿತಿಯಲ್ಲಿಲ್ಲ. 1962 ಮತ್ತು 70ರಲ್ಲಿ ಅಲ್ಲಿ ಅನಾಹುತಗಳು ಆಗಿವೆ. ಅವುಗಳನ್ನು ತಪ್ಪಿಸುವುದಕ್ಕೆ ಜನರ ಸೌಕರ್ಯಕ್ಕಾಗಿ ತೀವ್ರವಾಗಿ ಅಲ್ಲಿ ಒಂದು ಬ್ರಿಡ್ಜನ್ನು ಕಟ್ಟುತ್ತೀರಾ ?

ಶ್ರೀ ಎಚ್.ಎಂ. ಚನ್ನಬಸಪ್ಪ :—ತಂಗಡಿಗೆಯಲ್ಲಿ ಸಂಗಮ ಟೆಂಪಲ್ ಇರುತ್ತದೆ, ಅಲ್ಲಿ ಜನ ಯಥೇಚ್ಛವಾಗಿ ಬರುತ್ತಾರೆ ಮತ್ತು ಹೋಗುತ್ತಾರೆ, ಎನ್ನುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. ಅಲ್ಲಿ ಒಂದು ವಿಧವಾದಂಥ ಟ್ರಾನ್ಸ್‌ಪೋರ್ಟ್ ಆ ಜಾಗದಲ್ಲಿ ಅವಶ್ಯಕ ಎನ್ನುವುದು ನನ್ನ ಮನಸ್ಸಿಗೆ ಅನ್ನಿಸುತ್ತದೆ. ಆದರೆ ಪರಿಸ್ಥಿತಿ ಏನಪ್ಪ ಎಂದರೆ ಹಣವಿಲ್ಲ. ಅದು ನ್ಯಾಷನಲ್ ಹೈವೇಗೆ ಸೇರಿದ್ದ ಪಕ್ಷದಲ್ಲಿ ಬಹಳ ಸಂತೋಷ ಇತ್ತು, ಅದಕ್ಕೆ ಸುಮಾರು ಒಂದುವರೆ ಕೋಟಿ ರೂಪಾಯಿ ಆಗುತ್ತದೆ. ಇದು ತಮಗೂ ಗೊತ್ತಿದೆ ಅದಕ್ಕೋಸ್ಕರವಾಗಿ ಬೋಟ್ ಟ್ರಾನ್ಸ್‌ಪೋರ್ಟಿಗಾಗಿ ಸ್ಟೀಮ್ ಲಾಂಚ್ ಹಾಕುವುದಕ್ಕೆ ವ್ಯವಸ್ಥೆ ಮಾಡಿಕೊಡುತ್ತೇನೆ. ಮತ್ತು ಯಾತ್ರಾರ್ಥಿಗಳು ಬಹಳ ಜನ ಬಂದು ಹೋಗುವುದಕ್ಕೆ ಒಂದು ಪುಟ್ ಬ್ರಿಡ್ಜ್ ಹಾಕಿ ಜನಗಳಿಗೆ ಅನುಕೂಲ ಮಾಡುವುದಕ್ಕೆ ಸಾಧ್ಯವೇ ಎಂದು ಯೋಚನೆ ಮಾಡುತ್ತೇನೆ.

ಶ್ರೀ ಎಂ. ಎಂ. ಸಜ್ಜನ್ :—ತಾವು [ಸಿ] ಗೆ ಉತ್ತರವಾಗಿ 'ಎಸ್' ಎಂದು ಹೇಳಿದ್ದೀರಿ. ಅದಕ್ಕಾಗಿ ತಂಗಡಿಗಿಯ ಬಳಿ ದಿನವೂ ಸಾವಿರ ಗಟ್ಟಲೆ ಜನ ಆಚೆ ಕಡೆಯಿಂದ ಈಚೆ ಕಡೆಗೆ ಈಚೆ ಕಡೆಯಿಂದ ಆಚೆಕಡೆಗೆ ಕೃಷ್ಣಾ ನದಿಯನ್ನು ದಾಟಿ ಹೋಗಬೇಕಾಗಿರುವುದರಿಂದ ಜನ ಅಡ್ಡಾಟ ಹೆಚ್ಚಾಗುತ್ತಾ ಇದೆ. ಆ ಜಾಗದಲ್ಲಿ ನಾರಾಯಣಪುರ ಡ್ಯಾಮ್‌ನ ಬ್ಯಾಕ್‌ವರ್ಡ್ ವಾಟರ್‌ನಿಂದ ರಸ್ತೆ ಮೇಲೆ ನೀರು ಬಂದು ಆ ರಸ್ತೆ ಮುಳುಗಿ ಹೋಗುತ್ತಾ ಇದೆ. ಆದುದರಿಂದ ಆ ಜಾಗದಲ್ಲಿ ಒಂದು ಪೂಲ್ ಹಾಕದೇ ಹೋದರೆ ಜನರು ಆಚೆ ಕಡೆಯಿಂದ ಈಚೆ ಕಡೆಗೆ. ಈಚೆ ಕಡೆಯಿಂದ ಆಚೆಕಡೆಗೆ ಹೋಗುವುದಕ್ಕಾಗುವುದಿಲ್ಲ. ಇದರಿಂದ ಅವರ ಹಕ್ಕನ್ನು ಕಸಿದುಕೊಂಡಂತೆ ಆಗುವುದಿಲ್ಲವೇ ? ಆದುದರಿಂದ ಅವರ ರಕ್ಷಣೆಗೆ ಒಂದು ಬ್ರಿಡ್ಜನ್ನು ಮಾಡಿಕೊಡುವುದು ಉಚಿತವಲ್ಲವೇ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ :—ಈಗಾಗಲೇ ನಾನು ಆ ಬಗ್ಗೆ ಸ್ಪಷ್ಟವಾಗಿ ಉತ್ತರ ಹೇಳಿದ್ದೇನೆ. ಇದು ಯಾತ್ರಾರ್ಥಿ ಸ್ಥಳ, ಸಾವಿರಾರು ಜನ ಅಲ್ಲಿಗೆ ಹೋಗಿ ಬರತಕ್ಕಂಥ ಜಾಗವಾದುದರಿಂದ ಅಲ್ಲಿ ಒಂದು ಕ್ರಾಸಿಂಗ್ ಅವಶ್ಯಕತೆ ಇದೆ ಎಂದು ನನ್ನ ಮನಸ್ಸಿಗೂ ಅನಿಸಿದೆ. ಆದರೆ ಅಲ್ಲಿ ಒಂದು ದೊಡ್ಡ ಬ್ರಿಡ್ಜ್ ಕಟ್ಟಬೇಕಾದರೆ $1\frac{1}{3}$ ಕೋಟಿ ರೂಪಾಯಿ ಮೇಲೆ ಆಗುತ್ತದೆ. ಆದುದರಿಂದ ಈಗ ತಕ್ಷಣದಲ್ಲಿ ಒಂದು ಸ್ಟೀಮ್ ಲಾಂಚ್‌ನ್ನು ಹಾಕಿಸಿ ಕೊಡುತ್ತೇವೆ.

ಎರಡನೆಯದು ತಂಗಡಿಗಿಯ ಬಳಿ ಯಾತ್ರಾರ್ಥಿಗಳು ಬರುವ ಸ್ಥಳವಾದುದರಿಂದ ಅಲ್ಲಿ ಒಂದು ಫ್ಲಟ್ ಬ್ರಿಡ್ಜ್ ಹಾಕುವುದಕ್ಕೆ ಸಾಧ್ಯವೇ ಎನ್ನುವುದನ್ನು ಸರ್ಕಾರದವರು ಪರ್ಯಾಲೋಚನೆ ಮಾಡುತ್ತಿದ್ದಾರೆ.

ಶ್ರೀ ಸಿ. ಎನ್. ಪಾಟೀಲ್ :—ಸ್ವಾಮಿ, ನ್ಯಾಷನಲ್ ಹೈವೇ ಅಲೈನ್‌ಮೆಂಟ್ ಆಗುವುದಕ್ಕೆ ಮೊದಲು ಒಂದು ಬ್ರಿಡ್ಜ್‌ನ್ನು ತಂಗಡಿಗಿಯ ಬಳಿ ಹತ್ತಿರ ಆ ಜಾಗದಲ್ಲೇ ಆಗಲಿ ಅಥವಾ ಸ್ವಲ್ಪ ಕೆಳಗಡೆಯೇ ಆಗಲಿ ಹಾಕಬೇಕೆಂದು ದಿವಂಗತ ಶ್ರೀಮಾನ್ ಕಂಠಿಯವರ ಕಾಲದಲ್ಲಿ ಯೋಜನೆ ಮಾಡಿದ್ದರು. ಈಗ ಅದನ್ನು ಡೈವರ್ಟ್ ಮಾಡಿದ್ದಾರೆ. ಅದು ಐತಿಹಾಸಿಕವಾಗಿ 300–400 ವರ್ಷಗಳಿಂದಲೂ ಇರತಕ್ಕಂಥ ರಸ್ತೆ. ಬಿಜಾಪುರ ಮತ್ತು ರಾಯಚೂರು ಜನರು ಇಲ್ಲಿ ಒಂದು ಬ್ರಿಡ್ಜ್ ಆಗಬೇಕೆಂದು ಕೇಳುತ್ತಿದ್ದಾರೆ. Whatever bridge you construct on National Highway, you cannot divert this traffic of Thangadgi. I therefore request Government to consturct this Thangadgi Bridge whenever the finances permit. This request is on behalf of the entire people of Bijapur District and Raichur District.

ಶ್ರೀ ಹೆಚ್. ಎಂ. ಚೆನ್ನಬಸಪ್ಪ :—ಇದರ ಬಗ್ಗೆ ಯಾರೂ ಸಹ ಶಿಫಾರ್ಸು ಮಾಡದೇ ಇದ್ದರೂ ಕೂಡ ಅದು ಯಾತ್ರಾರ್ಥಿ ಸ್ಥಳವೆಂದು ನನಗೂ ಗೊತ್ತಿದೆ. ಇದು ಯಾತ್ರಾರ್ಥಿ ಸ್ಥಳ, ಇಲ್ಲಿಗೆ ಭಾರಿ ಸಮೂಹದಲ್ಲಿ ಜನರು ಬರುತ್ತಾರೆ ಎಂದು ಗೊತ್ತು. ಆದುದರಿಂದ ಮುಂದೆ ಪ್ರಾಜೆಕ್ಟ್ ಪ್ರೋಗ್ರಾಂ ಏನು ಮಾಡಬೇಕೆಂದು ಇದ್ದೇವೆ ಆದರಲ್ಲಿ ಇದನ್ನು ಹಾಕಲಿಕ್ಕೆ ಅಡ್ಡಿ ಇಲ್ಲ. ಅದೂ ಅಲ್ಲಿಗೆ ಒಂದು ಬ್ರಿಡ್ಜ್ ಹಾಕಿಬಿಟ್ಟು ಅಲ್ಲಿಗೆ ಒಂದು ಟೋಲ್‌ಗೇಟ್ ಹಾಕಿದರೆ ಆ ಹಣ ವಾಪಸ್ಸು ಬರುತ್ತದೆ ಎನ್ನುವ ಭರವಸೆ ಇದೆ. ಆದುದರಿಂದ ಅದನ್ನು ಮುಂದಿನ ಪ್ರೋಗ್ರಾಂನಲ್ಲಿ ಸೇರಿಸುವುದಕ್ಕೆ ಯೋಚನೆ ಮಾಡುತ್ತೇವೆ.

GRANTS TO PRE-PRIMARY EDUCATION INSTITUTIONS

856. Sri G. P. NANJAYYANAMATH (Guledgud).—

Will the Minister for Education be pleased to state :—

(*a*) the principle followed if any in giving grants to the pre-primary education institution managed by the private bodies in the old Mysore and integrated areas ;

(*b*) whether it is true that the institutions in old Mysore area are getting 50 per cent of the total admissible expenditure whereas the other areas are getting only twenty-five per cent ;

(*c*) if so, whether the Government has taken any action to avoid this discrimination ?